O.S.No.:454/2013
D.W.:1

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಈ ದಿನ ದಿಃ16.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ವಾದಿ ಪರ ಶ್ರೀ ಎಜಿಆರ್ ವಕೀಲರಿಂದಃ**

ನಾನು ವ್ಯಾಪಾರ ಮಾಡುತ್ತೇನೆ. ನನ್ನ ವಿರುದ್ದ ಶ್ರೀನಿವಾಸ್ ದಾವೆ ಸಲ್ಲಿಸಿರುತ್ತಾರೆ. ಜಮೀನಿನ ಕುರಿತಾಗಿ ದಾವೆ ಸಲ್ಲಿಸಿರುತ್ತಾರೆ. ದಾವಾಜಮೀನಿನ ಸರ್ವೆ ನಂ.41/6 ಕ್ಷೇತ್ರ 20 ಗುಂಟೆಗೆ ದಾವೆ ಸಲ್ಲಿಸಿರುತ್ತಾರೆ. 2017 ರಲ್ಲಿ ಸುವರ್ಣ ಮತ್ತು ರಮೇಶ್ ಇವರಿಂದ ದಾವಾಸ್ವತ್ತನ್ನು ನಾನು ಕ್ರಯಕ್ಕೆ ಪಡೆದಿರುತ್ತೇನೆ, ಆದರೆ ನಿಖರವಾದಿ ದಿನಾಂಕ ತಿಂಗಳು ಹೇಳಲು ಬರುವುದಿಲ್ಲ. ದಾವಾಸ್ವತ್ತು ರಮೇಶ್ ಇವರಿಗೆ ಅವರ ತಾತ ಮತ್ತು ಅಜ್ಜಿಯಿಂದ ಬಂದಿರುವ ಸ್ವತ್ತಾಗಿರುತ್ತದೆ ಎಂಬುದನ್ನು ತಿಳಿದುಕೊಂಡಿರುತ್ತೇನೆ.

2 ನೇ ಪ್ರತಿವಾದಿ ರಮೇಶ್ ಇವರ ತಾತನ ಹೆಸರು ಚಿಕ್ಕಹೈದೇಗೌಡ ಎಂದು ಇರುತ್ತದೆ. ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುತ್ತದೆ ಎಂದರೆ ನನಗೆ ಕನ್ನಡ ಓದಲು ಬರೆಯಲು ಬರುತ್ತದೆ.

ನಿಡಿ-1 ನನ್ನ ಕ್ರಯಪತ್ರದಲ್ಲಿ ಚಿಕ್ಕಹೈದೇಗೌಡರ ಮಗನಾದ ರಮೇಶ್ ಎಂದು ನಮೂದಿಸಲಾಗಿದೆ ಎಂದರೆ ಸರಿ. ಚಿಕ್ಕಹೈದೇಗೌಡ ಉಃ ಮಾರೇಗೌಡ ಇವರು ರಮೇಶ್ ಇವರ ತಾತನಾಗಬೇಕು ಎಂದರೆ ಸರಿ. ನನಗೆ ಕ್ರಯಪತ್ರವನ್ನು ಸುವರ್ಣ ಮತ್ತು ಅವರ ಮಕ್ಕಳು ಬರೆದುಕೊಟ್ಟಿರುತ್ತಾರೆ. ರಮೇಶ್ ರವರು ನನಗೆ ಕ್ರಯಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ.

ಸರ್ವೆ ನಂ.41/6(ಹಳೆ ಸರ್ವೆ ನಂ.41/2)ರ ಒಟ್ಟು ಕ್ಷೇತ್ರ 38 ಗುಂಟೆ ಇರುತ್ತದೆ. ಸದರಿ ಹಳೆ ಸರ್ವೆ ನಂ.41/2 ರಲ್ಲಿ 38 ಗುಂಟೆ ಕ್ಷೇತ್ರದಲ್ಲಿ 13 ವರೆ

ಗುಂಟೆ ಕ್ಷೇತ್ರವನ್ನು ವಾದಿ ದಿ.3.12.1998 ರಂದು 2 ನೇ ಪ್ರತಿವಾದಿ ರಮೇಶ್ ಇವರಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಸದರಿ 13 ವರೆ ಗುಂಟೆ ಕ್ಷೇತ್ರ ಈಗ ಹೊಸದಾಗಿ ಸರ್ವೆ ನಂ.41/5 ಎಂದು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿ.21.2.1979 ರಂದು 38 ಗುಂಟೆ ಪೈಕಿ 20 ಗುಂಟೆ ಕ್ಷೇತ್ರವನ್ನು ಎಂ.ಶ್ರೀನಿವಾಸ್ ಎನ್ನುವವರು ಕೆ.ಹೊಂಬಾಳೇಗೌಡ ಉಃ ಕಾಡೇಗೌಡ ಇವರಿಂದ ಕ್ರಯಕ್ಕೆ ಪಡೆದಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ 1979 ರ ಕ್ರಯಪತ್ರದಲ್ಲಿ ಸರ್ವೆ ನಂ.41/2 ರ ಬದಲಾಗಿ ಸರ್ವೆ ನಂ.41/3 ಎಂದು ತಪ್ಪಾಗಿ ನಮೂದಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಿ.16.1.1992 ರಲ್ಲಿ ವಾದಿ ಶ್ರೀನಿವಾಸ್ ಇವರು ಎಂ.ಶ್ರೀನಿವಾಸ್ ಇವರಿಂದ ಸರ್ವೆ ನಂ.41/2 ರಲ್ಲಿ 20 ಗುಂಟೆ ಕ್ಷೇತ್ರವನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.41/2 ಈಗ ಸರ್ವೆ ನಂ.41/6 ಅಗಿದೆ ಎಂದರೆ ಸರಿ.

ದಾವಾಸ್ವತ್ತನ್ನು ಕ್ರಯಕ್ಕೆ ಪಡೆದಾಗಿನಿಂದ ವಾದಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಕ್ರಯಪತ್ರದಲ್ಲಿ ಸರ್ವೆ ನಂ.41/2 ಎಂದು ಬರೆಯುವ ಬದಲಾಗಿ ಸರ್ವೆ ನಂ.41/3 ಎಂದು ತಪ್ಪಾಗಿ ನಮೂದಿಸಿದ್ದರೂ ವಾದಿ ಈಗ ಹೊಸ ಸರ್ವೆ ನಂ.41/6 ರ 20 ಗುಂಟೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸದರಿ 38 ಗುಂಟೆ ಕ್ಷೇತ್ರದ ಪೈಕಿ 4 ವರೆ ಗುಂಟೆ ಜಮೀನು ಬಿಡಬ್ಲ್ಯೂಎಸ್ಎಸ್ ಬಿ ಸ್ವಾಧೀನ ಪಡಿಸಿಕೊಂಡಿದೆ ಎಂದರೆ ಸರಿ.

2 ನೇ ಪ್ರತಿವಾದಿಯ ತಾತ ಮಾರೇಗೌಡ ಉಃ ಚಿಕ್ಕಹೈದೇಗೌಡನ ಹೆಸರಿನಲ್ಲಿ 20 ಗುಂಟೆ ಕ್ಷೇತ್ರ ಗಣೀಕೃತ ಪಹಣಿಯಲ್ಲಿ ತಪ್ಪಾಗಿ ನಮೂದಾಗಿರುವ ವಿಚಾರ ನನಗೆ ಗೊತ್ತಿಲ್ಲ. 20 ಗುಂಟೆ ಜಮೀನನ್ನು ಕಬಳಿಸುವ ಉದ್ದೇಶದಿಂದ 2 ನೇ ಪ್ರತಿವಾದಿ ರಮೇಶ್ ಪಹಣಿಯನ್ನು ಸೃಷ್ಟಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

O.S.No.:454/2013
D.W.:1

1979 ಮತ್ತು 1992 ರಲ್ಲಿ ವಾದಿ 20 ಗುಂಟೆ ಮತ್ತು 13 ವರೆ ಗುಂಟೆ ಕ್ರಮವಾಗಿ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ವಾದಿ 33 ವರೆ ಗುಂಟೆ ಕ್ರಯಕ್ಕೆ ಪಡೆದಿರುವುದರಿಂದ ಮತ್ತು 4 ವರೆ ಗುಂಟೆ ಬಿ.ಡಬ್ಲ್ಯೂಎಸ್ಎಸ್ ಬಿ ಸ್ವಾಧೀನಪಡಿಸಿಕೊಂಡಿರುವುದರಿಂದ ರಮೇಶ್ ಇವರ ಹೆಸರಿಗೆ ಯಾವುದೇ ಕ್ಷೇತ್ರ ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ರಿಂದ 4 ರವರೊಂದಿಗೆ ಸೇರಿಕೊಂಡು ನಾನು ಸುಳ್ಳು ಕ್ರಯಪತ್ರ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿ ರಮೇಶ್ ಸುಳ್ಳು ಪಹಣಿಯ ಆಧಾರದ ಮೇಲೆ ದಿ.23.6.2011 ರಲ್ಲಿ ಹೆಂಡತಿಯ ಹೆಸರಿನಲ್ಲಿ ದಾನಪತ್ರ ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸುಳ್ಳು ಕ್ರಯಪತ್ರದ ಆಧಾರದ ಮೇಲೆ ಸುಳ್ಳು ಪಹಣಿಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.